## ಕಿರುಪ್ರತಿ- ೧

ನಾನು ಸಣ್ಣವನಿದ್ದಾಗ, ನನ್ನ ಬಳಿ ಒಂದು ಸೂಕ್ಷ್ಮದರ್ಶಕವಿತ್ತು. ಇದರಡಿ ಎಲ್ಲವನ್ನು ಇಟ್ಟು ನೋಡುವುದು ನನ್ನ ಅತ್ಯಂತ ಪ್ರಿಯವಾದ ಕೆಲಸವಾಗಿತ್ತು. ಇದನ್ನು ಮಾಡಲು ಸಹನೆ ಇರಬೇಕಿತ್ತು. ಒಂದು ವಸ್ತುವನ್ನು ಇದರ ಕೆಳಗಿಟ್ಟು ನಾನು ಕೊನೆ ಇರಲಾರದಂತೆ ವೀಕ್ಷಿಸುತ್ತಿದ್ದೆ. ನಾನು ಅನೇಕ ಆಸಕ್ತಿದಾಯಕ ಸಂಗತಿಗಳನ್ನು ನೋಡುತ್ತಿದೆ ಉದಾಹರಣೆಗೆ, ಡೈಯಾಟಂ, ಸ್ಲೈಡ್ ನ ಒಂದು ತುದಿಯಿದ ಇನ್ನೊಂದು ತುದಿಗೆ ಹೋಗುವುದನ್ನು ನೋಡುತ್ತಿದೆ.

ಒಂದು ದಿನ ಒಂದು ಪ್ರಯಾರಮೇಶಿಯಾ ಅನ್ನು ಗಮನಿಸುತ್ತಿದ್ದೆ ಮತ್ತು ಶಾಲೆ ಅಥವಾ ಕಾಲೇಜಿನ ಪುಸ್ತಕದಲ್ಲಿಯೂ ವರ್ಣಿಸದಿದ್ದ, ಏನನ್ನೋ ಗಮನಿಸಿದೆ. ಈ ಪುಸ್ತಕಗಳೂ ಪ್ರಪಂಚಕ್ಕೆ ವಿಷಯಗಳನ್ನು ಸರಳೀಕರಿಸಿ ಕೊಡುತ್ತಾರೆ. ಇದು ಹೇಗಿರುತ್ತದೆ ಎಂದರೆ, ಇದು ಅವರಿಗೆ 'ಬೇಕಾದ' ರೀತಿಯಲ್ಲಿರುತ್ತದೆ. ಪ್ರಾಣಿಗಳ ವರ್ತನೆಯ ಬಗ್ಗೆ ತಿಳುಸುವಾಗ ಈ ಪುಸ್ತಕಗಳು ಹೀಗೆ ಪ್ರಾರಂಭಿಸುತ್ತವೆ – "ಪ್ಯಾರಮೇಶಿಯಂ ಬಹಳ ಸರಳ ಜೀವಿ. ಇದರ ವರ್ತನೆ ಬಹಳ ಸರಳವಾದದ್ದು. ಇದರ ಜಾರುವ ಆಕಾರ ನೀರಿನಲ್ಲಿ ಚಲಿಸುವಾಗ ತಿರುವು ತೆಗೆದುಕೊಳ್ಳುತ್ತಿರುತ್ತದೆ. ಯಾವುದಾದರೂ ಅಡಚಣೆ ಇದ್ದರೆ ಅದಕ್ಕೆ ಡಿಕ್ಕಿ ಹೊಡೆದು, ಆ ಸಮಯದಲ್ಲಿ, ಹಿಮ್ಮೆಟ್ಟಿ, ಒಂದು ಕೋನದಲ್ಲಿ ತಿರುಗಿ ಪುನ: ಚಲಿಸಲಾರಂಭಿಸುತ್ತದೆ. ಇಲ್ಲಿ ಸಂವಹನವಾಗುವ ಐಡಿಯಾ ಏನೆಂದರೆ, ಇದು ಕಂಪ್ಯೂಟರ್ ಪ್ರೊಗ್ರಾಂ ರೀತಿಯ ಯಾಂತ್ರಿಕ ಕ್ರಿಯೆ ಎಂಬುದು. ಆದರೆ ನನಗೆ ಆ ರೀತಿ ಕಾಣಿಸುತ್ತಿರಲಿಲ್ಲ. ಅವು ಬೇರೆ ಬೇರೆ ದೂರ ಕ್ರಮಿಸುತ್ತವೆ, ಬೇರೆ ಬೇರೆ ಸಮಯದಲ್ಲಿ ತಿರುವು ತೆಗೆದುಕೊಳ್ಳುತ್ತದೆ, ಅನೇಕ ಸಲ ಅವು ಬೇರೆ ಬೇರೆ ಕೋನಗಳಲ್ಲಿ ತಿರುಗುತ್ತವೆ; ಯಾವಾಗಲೂ ಬಲಕ್ಕೆ ತಿರುಗುವುದಿಲ್ಲ. ಒಟ್ಟಿನಲ್ಲಿ ಅವು ಬಹಳ ಕ್ರಮವಿಲ್ಲದ ಜೀವಿಗಳು. ಇದು ಗೊತ್ತು ಗುರಿ ಇಲ್ಲದೆ ಮಾಡಿದಂತೆ ಗೋಚರವಾಗುತ್ತದೆ ಏಕೆಂದರೆ ಅವು ಯಾವುದಕ್ಕೆ ಡಿಕ್ಕಿ ಹೊಡೆಯುತ್ತಿದೆ ಎಂದು ನಮಗೆ ತಿಳಿದಿಲ್ಲ. ಅವು ಯಾವು ರಾಸಾಯನಿಕ ವಸ್ತುವಿನ ವಾಸನೆ ಗ್ರಹಿಸುತ್ತಿದೆಯೋ ಏನೋ ನಮಗೆ ಗೊತ್ತಿಲ್ಲ.

ಈ ನೀರೆಲ್ಲ ಆವಿಯಾದರೆ ಪ್ಯಾರಮೇಶಿಯಂಗೆ ಏನಾಗುತ್ತದೆ ಎಂದು ನೋಡುವ ಆಸೆ ನನಗಿತ್ತು. ಪುಸ್ತಕಗಳು ಪ್ಯಾರಾಮೇಶಿಯಂ ಇರುವ ನೀರು ಆವಿಯಾದರೆ, ಪ್ಯಾರಮೇಶಿಯಂ ಒಣಗೆ ಬೀಜದಂತೆ ಆಗುತ್ತದೆ ಎಂದು ತಿಳಿಸಿದ್ದವು. ನನ್ನ ಸೂಕ್ಷ್ಮದರ್ಶಕ ಯಂತ್ರದ ಕೆಳಗೆ ಒಂದು ಹನಿ ನೀರಿತ್ತು. ಆ ಹನಿಯಲ್ಲಿ ಒಂದು ಪ್ಯಾರಮೇಶಿಯಂ ಮತ್ತು ಅದೇ ಗಾತ್ರದ ಸ್ವಲ್ಪ 'ಹುಲ್ಲು' ಇತ್ತು. ಈ ಹುಲ್ಲು ಕಡ್ಡಿಗಳ ಜಾಲದಂತೆ ಕಾಣಿಸುತ್ತಿತ್ತು. ನೀರಿನ ಹನಿ ಆವಿಯಾಗುತ್ತಿದ್ದಂತೆ, ಮುಂದಿನ ಹದಿನೈದು ಇಪ್ಪತ್ತು ನಿಮಿಷಗಳು ಪ್ಯಾರಮೇಶಿಯಂ ಬಿಗಿ ಪರಿಸ್ಥಿತಿಯಲ್ಲಿತ್ತು. ಅದು ತನಗೆ ಚಲಿಸಲು ಸಾಧ್ಯವಾಗದಿರುವ ತನಕವೂ ಸಾಕಷ್ಟು ಹಿಂದೆ ಮುಂದೆ ಚಲಿಸುತ್ತಿತ್ತು. ನಂತರ ಈ ಕಡ್ಡಿಗಳ ನಡುವೆ ಇದು ಸಿಕ್ಕಿಹಾಕಿಕೊಂಡಂತೆ ಇತ್ತು.

ನಂತರ ನಾನು ಹಿಂದೆಂದೂ ನೋಡದೆ, ಕೇಳದೆ ಇದ್ದದ್ದನ್ನು ನೋಡಿದೆ. ಪ್ಯಾರಮೇಶಿಯಂ ತನ್ನ ಆಕಾರವನ್ನು ಕಳೆದುಕೊಂಡಿತು. ಅಮೀಬಾದಂತೆ ಬಾಗಿತು. ಇದು ತನ್ನನ್ನು ತಾನೇ ಒಂದು ಕಡ್ಡಿಯ ಕಡೆ ತಳ್ಳಿಕೊಂಡಿತು ಮತ್ತು ಎರಡಾಗಿ ವಿಭಜನೆಯಾಗಲು ಪ್ರಾರಂಭಿಸಿತು. ಆಗ ಇದು ಒಳ್ಳೆಯ ಐಡಿಯಾ ಅಲ್ಲ ಎಂದು ನಿರ್ಧರಿಸಿ, ಹಿಂದೆ ಸರಿಯಿತು.

(ರಿಚರ್ಡ್.ಪಿ.ಫೈನ್ಮನ್, 1992, *Surely You're Joking, Mr.Feynman*! ವಿಂಟಾಜ್, ಲಂಡನ್.ಪುಟ, 91–92)